

‘ಎಂಥದಾ ಮಾರಾಯ... ಎರಡು ದಿನ ಎರಡು ದಿನ ಅಂತ ಹೇಳ್ಳಿಕ್ಕೆ ಸುರುಮಾಡಿ ಹದಿನೈದು ದಿನ ಆಯಿತು. ಹೇಗೆ ಉಂಟಾ ಹಾಗೆಯೇ ಉಂಟು ಪರಿಸ್ಥಿತಿ. ಆ ದೇವರಾದರೂ ಯಾಕೆ ಹೀಗೆ ಪರೀಕ್ಷೆ ಮಾಡ್ತಾನಾ ಏನ. ಐವತ್ತನಾಲ್ಕು ವರ್ಷ ಒಟ್ಟಿಗೆ ಇದ್ದೆವು. ಈಗ ಈ ಪ್ರಾಯದಲ್ಲಿ ನಂಗೆ ಇದೆಲ್ಲ ನೋಡುವ ಯೋಗ ಬೇಕಿತ್ತಾ?’ ಅಂತ ಹೇಳಿ ದೊಡ್ಡಕ್ಕೆ ಸ್ವಾಸ ಬಿಟ್ಟರು. ಆಗ ಹತ್ತಿರ ಇದ್ದವರು, ‘ಅಮ್ಮಾ ಸಮಾಧಾನ ಮಾಡಿಕೊಳ್ಳಿ ದೇವರಿದ್ದಾನೆ’ ಅಂತ ಧೈರ್ಯ ಹೇಳಿದರು.

‘ಯೆಂತ ದೇವರಿದ್ದಾನಾ? ಯೆಂತ ಕತೆಯಾ? ಮದುವೆ ಆದ ದಿವಸದಿಂದ ಅವರು ಒಂದೇ ಒಂದು ದಿನ ಹುಷಾರಿಲ್ಲ ಅಂತ ಮಲಗಿದ್ದನ್ನು ನಾನು ನೋಡ್ಲಿಲ್ಲ. ಈಗ ಒಂದು ವರ್ಷದಿಂದ ಹೀಗೆ ಆಗಿ ಮಲಗ್ತಾರೆ ಅಂತ ನಾನು ಕನಸಿನಲ್ಲಿ ಸಾ ಎಣಿಸಿರ್ಲಿಲ್ಲ. ಮೂರು ವರ್ಷಗಳ ಹಿಂದೆ ಕ್ಯಾನ್ಸರ್ ಉಂಟು ನಂಗೆ ಅಂತ ಗೊತ್ತಾದಾಗ ನಾನೇ ಸುರೂವಿಗೆ ಹೋಗ್ತೇನೆ ಅಂತ ಎಣಿಸಿದ್ದೆ. ಆದ್ರೆ ಈಗ ಆಗ್ತಾ ಇರೂದೇ ಬೇರೆ’ ಅಂತ ಹೇಳಿ ಬಿಕ್ಕಿಬಿಕ್ಕಿ ಕೂಗಿದ್ರು. ವಿವೇಕನಿಗೆ ಎಂತ ಹೇಳ್ಬೇಕು ಅಂತ ಗೊತ್ತಾಗಲಿಲ್ಲ. ಅಲ್ಲಿ ಇರ್ಲಿಕ್ಕೆ ಕಿರಿಕಿರಿ ಆಯಿತು. ಸ್ವಲ್ಪ ಅಲ್ಲಿಂದ ಹೊರಗೆ ಹೋಗಿ ಒಂದು ರೌಂಡು ಸುತ್ತಾಡಿ ಬರುವಾ ಅಂತ ಹೊರಟ.

ಗೋವಿಂದ ರಾಯರು ಅಪ್ಪಟ ಕೃಷಿಕರಾಗಿದ್ದರು. ಪಿತ್ರಾರ್ಜಿತದ ಆಸ್ತಿ ಸ್ವಲ್ಪ ಇತ್ತು. ಜೊತೆಗೆ, ತಾನೇ ಸ್ವತಹ ಒಂದಿಷ್ಟು ತೆಂಗು, ಕಂಗು ತೋಟ ಮಾಡಿದ್ದರು. ಹಿರಿಯರ ಮನೆ, ಕೃಷಿಯಿಂದ ಬರ್ತಾ ಇದ್ದ ಆದಾಯ ಇವೆಲ್ಲ ಅವರ ಬದುಕಿಗೆ ಸಾಕಾಗ್ತಾ ಇತ್ತು. ಸಾಕ್ಷಾತ್ ಅನ್ನಪೂರ್ಣೆಯಂಥ ಹೆಂಡತಿ ಅನಸೂಯಮ್ಮ. ಗಂಡು ಮಗ ಒಬ್ಬ. ಹೆಣ್ಣುಮಗಳೊಬ್ಬಳು. ಇಬ್ರೂ